




ಸ್ನೇಹಿತ ತನ್ನ ಹೆಂಡತಿಯೊಂದಿಗೆ ಜಗಳವಾಡುತ್ತಿದ್ದುದನ್ನು ನೋಡಿದ ರಾಮು ಮರುದಿನ ಸ್ನೇಹಿತನನ್ನು ಕೇಳಿದ

ರಾಮು : ನಿನ್ನೆ ಹೆಂಡತಿ ಜತೆ ಜಗಳವಾಡುತ್ತಿದ್ದ್ಯಲ್ಲಾ, ಕೊನೆಗೆ ಏನಾಯಿತು?

ಸ್ನೇಹಿತ : ಅವಳು ನನ್ನೆದುರು ಮೊಣಕಾಲೂರಿದಳು!

ರಾಮು : ಅದು ಹೇಗೆ ಸಾಧ್ಯವಾಯಿತು?

ಸ್ನೇಹಿತ : ನಾನು ಮಂಚದ ಕೆಳಗೆ ನುಸುಳಿದ್ದೆ..!

★★★

ಹಾಸ್ಯ

ಮೊದಲ ಬಾರಿಗೆ ಬೆಂಗಳೂರು ನೋಡಲೆಂದು ಬಂದು, ನಗರದ ತುಂಬೆಲ್ಲಾ ಓಡಾಡುತ್ತಿದ್ದ ಗುಂಡನ ಬಳಿ ಸಾಕಷ್ಟು ಹಣ ಇತ್ತು. ಇದನ್ನು ತಿಳಿದ ಕಳ್ಳರು ರಾತ್ರಿ ಅವನು ತಂಗಿದ್ದ ಕೊಠಡಿಗೆ ತೆರಳಿದರು.

ಕಳ್ಳರು: ನಿನ್ನ ಬಳಿಯಿರುವ ಹಣವನ್ನೆಲ್ಲಾ ನಮಗೆ ಕೊಡು,

ಗುಂಡ: ಕೊಡೋದಿಲ್ಲ ಅಂದ್ರೆ ಏನ್ಮಾಡ್ತೀರಾ ?

ಕಳ್ಳರು: ನಿನ್ನ ತಲೆ ತೆಗೀತೀವಿ..

ಗುಂಡ: ಅರಾಮವಾಗಿ ತೆಗೆದುಕೊಂಡು ಹೋಗಿ ಏನೂ ತೊಂದರೆ ಇಲ್ಲಾ, ಯಾಕಂದ್ರೆ, ಈ ಬೆಂಗಳೂರಲ್ಲಿ ತಲೆ ಇಲ್ದೆ ನೂರು ವರ್ಷ ಬೇಕಾದ್ರೂ ಇರಬಹುದು. ಆದ್ರೆ ಹಣ ಇಲ್ದೆ ಅರ್ಧ ಗಂಟೆನೂ ಇರೋಕಾಗಲ್ಲ..!

(ಸಂಗ್ರಹ) **ಪ.ನಾ.ಹಳ್ಳಿ.ಹರೀಶ್ ಕುಮಾರ್**

ಗುಂಡನ ಪತ್ನಿಯನ್ನು ಆಸ್ಪತ್ರೆಗೆ ಸೇರಿಸಿದ್ದರು. ಗುಂಡನನ್ನು ಸಮಾಧಾನಪಡಿಸಲು ಹೋದ ಅತ್ತೆ, ಮಾವ: ಏನಾಗುತ್ತೋ ಅಂತ ಚಿಂತೆ ಮಾಡ್ಬೇಡಿ ಅಳಿಯಂದ್ರೆ.

ಗುಂಡ: ಅಯ್ಯೋ ಹಂಗೇನೂ ಇಲ್ಲ. ನನ್ನ ಚಿಂತೇನೇ ಬೇರೆ.

ಅತ್ತೆ,ಮಾವ: ಏನು?

ಗುಂಡ: ಏಷ್ಟಾಗುತ್ತೋ ಅಂತ

(ಸಂಗ್ರಹ) **ಹಾಡ್ಯ ಬ.ಜಯಾನಂದ**




ಅಂಗಡಿ ಬಾಗಿಲಲ್ಲಿ ಹೀಗೊಂದು ಬೋರ್ಡ್

ನಿಮ್ಮ ಅನುಕೂಲಕ್ಕಾಗಿ ಈ ಅಂಗಡಿ ತೆರೆದಿರುತ್ತದೆ. ಬೇರೆಲ್ಲೋ ಹೋಗಿ ಮೋಸ ಹೋಗಬೇಡಿ. ಇಲ್ಲಿಗೇ ಬನ್ನಿ!

★★★

ಹಲ್ಲಿಯೊಂದು ಜೋರಾಗಿ ಲೊಚಗುಡುತ್ತಿತ್ತು ಪಾಠದಲ್ಲಿ ನಿರತಳಾಗಿದ್ದ ಆರು ವರ್ಷದ ಅನಿತಾ ಅವಳ ಅಮ್ಮನನ್ನು ಕೇಳಿದಳು: ಯಾರಿಗಮ್ಮ, ಆ ಹಲ್ಲಿ ಮುತ್ತು ಕೊಡುತ್ತಿರುವುದು? ಇನ್ನೊಂದು ಹಲ್ಲಿ ಕಾಣುತ್ತಲೇ ಇಲ್ಲ!

(ಸಂಗ್ರಹ) **ಎ.ಕೆ.ಪಟ್ಟಾಭಿ**


